ಇನ್ನೂ ಇಲ್ಲೇ ಇದೆ. ಮಾರ್ಚಿಕೊನೆ ಆಗುತ್ತಾ ಬಂತು. ಆ ಕೆಲಸವನ್ನು ಇವರು ಯಾವಾಗ ಶುರು ಮಾಡುತ್ತಾರೆ, ಮಳೆ ನಮ್ಮಲ್ಲಿ ಈಗಾಗಲೇ ಶುರು ಆಗಿದೆ. ಅಲ್ಲಿ ಅಧಿಕಾರಿಗಳನ್ನು ಕೇಳಿದರೆ ಜಲ್ಲಿ ಇಲ್ಲ, ಡಾಂಬರ್ ಇಲ್ಲ, ಟ್ರಜರಿ ಬ್ಯಾನ್ ಇದೆ, ಹಣ ಮಂಜೂರಾತಿ ಆಗಿಲ್ಲ ಅಂತ ಉತ್ತರ ಹೇಳುತ್ತಿದ್ದಾರೆ. ಹಾಗಿದ್ದರೆ ಇವರು ಯಾವಾಗ ಈ ಕೆಲಸಗಳನ್ನು ಮಾಡಿಸಿಕೊಡುತ್ತಾರೆಂದು ನಾನು ಕೇಳ ಬಯಸುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್ : ಅವರು ಈಗ ಪ್ರಸ್ತಾಪ ಮಾಡಿದ್ದಾರೆ. ಅದನ್ನು ನಾನು ಈ ದಿವಸವೇ ತೆಗೆಸಿ ನೋಡುತ್ತೇನೆ.

**ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರದಿಂದ ಬರುತ್ತಿರುವ ಎಲ್.ಓ.ಸಿ. ಹಣ ಕುರಿತು**

574 - ಶ್ರೀ ಬಾಬೂರಾವ್ ಚವಾಣ್ (ಔರಾದ್) : ಮಾನ್ಯ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಪ್ರಾಧಿಕಾರದಿಂದ ಬರುತ್ತಿರುವ ಎಲ್.ಓ.ಸಿ. ಹಣ , ಮತ ಕ್ಷೇತ್ರವಾರು ಬಿಡುಗಡೆ ಮಾಡಲಾಗುವುದೋ ಅಥವಾ ತಾಲ್ಲೂಕುವಾರು ಬಿಡುಗಡೆ ಮಾಡಲಾಗುವುದೋ?*

*ಆ) ಹಾಗಾದರೆ ಸರ್ಕಾರವು ಸರಿಸಮನಾದ ರೀತಿಯಲ್ಲಿ ಶಾಸಕರ ಮತಕ್ಷೇತ್ರಗಳಿಗೆ ಕೊಡುವುದೇ?*

*ಇ) ಈ ಬಗ್ಗೆ ಸರ್ಕಾರದ ನಿಲುವು ಏನು?*

ಶ್ರೀ ರಂಗದೇವ ರಾಯುಲು (ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು) :

ಅ) ಇಲ್ಲ. ಇಲಾಖಾವಾರು ಬಿಡುಗಡೆ ಮಾಡಲಾಗುವುದು.

ಆ) ಭೌತಿಕ ಪ್ರಗತಿಯನ್ನು ಪರಿಗಣಿಸಿ ಹಣವನ್ನು ಹಂಚಲಾಗುತ್ತಿದೆ.

ಇ) ಪ್ರಾದೇಶಿಕ ಅಸಮತೋಲನವನ್ನು ನಿವಾರಿಸಿ ಎಲ್ಲಾ ಪ್ರದೇಶವನ್ನು ಹೈದರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಡಿಯಲ್ಲಿ ಅಭಿವೃದ್ಧಿಗೊಳಿಸಲು ಉದ್ದೇಶಿಸಲಾಗಿದೆ.

ಶ್ರೀ ಬಾಬುರಾವ್ ಚವಾಣ್ : ಮಾನ್ಯ ಅಧ್ಯಕ್ಷರೇ, ನಾನು ಕೇಳತಕ್ಕಂಥ ಪ್ರಶ್ನೆ ಏನೆಂದರೆ ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಯಿಂದ ಎಂ.ಎಲ್.ಎ. ಗ್ರಾಂಟ್ಸ್ ಮತ್ತು ನಾನ್. ಎಂ.ಎಲ್.ಎ ಗ್ರ್ಯಾಂಟ್ಸ್ ಅಂತ ಎರಡು ರೂಪದಿಂದ ಸರ್ಕಾರದಿಂದ ಹಣ ಬಿಡುಗಡೆ ಆಗುತ್ತಿದೆ. ಆದರೆ ಎಂ.ಎಲ್.ಎ ಗ್ರ್ಯಾಂಟ್ಸ್‌ನಲ್ಲಿ ಪ್ರತಿ ಎಂ.ಎಲ್.ಎ.ಗೆ ಒಂದು ಕೋಟಿ 50 ಲಕ್ಷ ರೂಪಾಯಿಯನ್ನು 3 ವರ್ಷಗಳಿಗೋಸ್ಕರ ಕೊಟ್ಟಿದ್ದೀರಿ. ಆದರೆ ಒಂದು ತಾಲ್ಲೂಕಿನಲ್ಲಿ ಮೂರು ಜನ ಶಾಸಕರುಗಳು ಇರುವುದರಿಂದ ತಾಲ್ಲೂಕು ಅಧಿಕಾರಿಗಳು ಬರತಕ್ಕಂಥ ಹಣದಲ್ಲಿ ಸಮವಾಗಿ ಖರ್ಚು ಮಾಡಬೇಕಾಗಿತ್ತು.ಆದರೆ ಅವರು ಏನು ಮಾಡಿದ್ದಾರೆಂದರೆ ಹೆಚ್.ಕೆ.ಡಿ.ಪಿ. ದುಡ್ಡನ್ನು ಒಬ್ಬರು ಶಾಸಕರಿಗೆ ಜಾಸ್ತಿ ಖರ್ಚು ಮಾಡಿದ್ದಾರೆ. ಇನ್ನೊಬ್ಬ ಶಾಸಕರಿಗೆ ಖರ್ಚು ಮಾಡಿಲ್ಲ. ಏಕೆಂದರೆ ಕೆಲಸವನ್ನೇ ಶುರು ಮಾಡಿಲ್ಲ. ಒಬ್ಬ ಶಾಸಕರಿಗೆ ಕೆಲಸ ಶುರು ಮಾಡಿದ್ದಾರೆ ಮತ್ತು ಜಾಸ್ತಿ ಹಣ ಖರ್ಚು ಮಾಡಿದ್ದಾರೆ. 1.50 ಕೋಟಿ ಮೀರಿ 1.87 ಕೋಟಿವರೆಗೆ ಖರ್ಚು ಮಾಡಿದ್ದಾರೆ. 1.50 ಕೋಟಿಯನ್ನು ಕ್ರಾಸ್ ಮಾಡಲಿಕ್ಕೆ ಯಾರು ಅಧಿಕಾರ ಕೊಟ್ಟರು. ಹಾಗೆ ಇನ್ನೊಬ್ಬ ಶಾಸಕರಿಗೆ ಹಣ ಖರ್ಚು ಮಾಡಿಲ್ಲ, ಕೆಲಸ ಶುರು ಮಾಡಿಲ್ಲ. ಒಂದು ತಾಲ್ಲೂಕಿನಲ್ಲಿ 3 ಜನ ಎಂಎಲ್‌ಎ ಇರುವುದರಿಂದ ಸರಿಸಮಾನವಾದ ರೀತಿಯಲ್ಲಿ ಅಧಿಕಾರಿಗಳು ಖರ್ಚು ಮಾಡುತ್ತಿಲ್ಲ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತಿದ್ದೇನೆ, ತಾವು ಎಂ.ಎಲ್.ಎ ಗ್ರಾಂಟ್ಸ್ ಅಂತ ಏನು ಕೊಡುತ್ತಿದ್ದೀರಿ

ಹೆಚ್ ಕೆ.ಡಿ.ಬಿ. ಯಲ್ಲಿ ಅದನ್ನು ಎಲ್ಲಾ ಎಂ.ಎಲ್.ಎ ಗಳಿಗೆ ಕೊಡುತ್ತಿದ್ದೀರಿ. ಇದನ್ನು ಮತಕ್ಷೇತ್ರದ ಪ್ರಕಾರ ಮತಕ್ಷೇತ್ರವಾರು ಹಣವನ್ನು ಅಲೀಜ್ ಮಾಡುತ್ತೀರಾ? ತಾಲ್ಲೂಕು ಅಧಿಕಾರಿಗೆ ಅಧಿಕಾರ ಕೊಟ್ಟರೆ 3 ಎಂ.ಎಲ್.ಎ ಗಳಲ್ಲಿ ಒಬ್ಬರಿಗೆ ಜಾಸ್ತಿ ಖರ್ಚು ಮಾಡುತ್ತಾರೆ ಒಬ್ಬರಿಗೆ ಕಡಿಮೆ ಖರ್ಚು ಮಾಡುತ್ತಾರೆ. ಆದ್ದರಿಂದ ತಾವು ಮತಕ್ಷೇತ್ರವಾರು ಬಿಡುಗಡೆ ಮಾಡುತ್ತೀರಾ ಅಂತ ನಾನು ಕೇಳುತ್ತೇನೆ. ಅದನ್ನು ಮಾಡಲಿಕ್ಕೆ ತೊಂದರೆ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಪ್ರತಿ ಮತಕ್ಷೇತ್ರಕ್ಕೆ 50 ಲಕ್ಷ ರೂಪಾಯಿ ಪ್ರತಿ ವರ್ಷ ಖರ್ಚು ಮಾಡಬೇಕು ಎಂದು ನಿಗಧಿಪಡಿಸಿದ್ದೇವೆ. ಅದರ ಪ್ರಕಾರ 3 ವರ್ಷ ಎಸ್ಟಿಮೇಟನ್ನು ತೆಗೆದುಕೊಂಡು ಸುಮಾರು 1 ಕೋಟಿ 50 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕು ಅಂತ ಹೇಳಿ ತೀರ್ಮಾನ ತೆಗೆದುಕೊಂಡು ಅದೇ ರೀತಿಯಾಗಿ ಪ್ರತಿಯೊಂದು ಕ್ಷೇತ್ರದಲ್ಲೂ ಖರ್ಚು ಮಾಡುತ್ತಿದ್ದಾರೆ. ಅವರು ಹೇಳುವುದು ಏನೆಂದರೆ ಒಂದು ಕೋಟಿ 50 ಲಕ್ಷ ರೂಪಾಯಿಗಳೆಂದು ನಮ್ಮಲ್ಲಿ ನಿಗದಿ ಮಾಡಿದರೂ ಕೂಡ ಇವತ್ತು ಅದು ಖರ್ಚಾಗಿಲ್ಲ, ಅದಕ್ಕಾಗಿ ಇದು ಅನ್ಯಾಯವಾಗಿದೆ, ಇದನ್ನು ಸರಿಪಡಿಸಬೇಕು ಎಂದು ಏನು ಹೇಳುತ್ತಿದ್ದಾರೆ ಅದನ್ನು ನಾನು ಕೂಡ ಒಪ್ಪುತ್ತೇನೆ ಕನಿಷ್ಟ ಪಕ್ಷ ಒಂದು ಕೋಟಿ 50 ಲಕ್ಷ ರೂಪಾಯಿ ಅವರಿಗೆ ಏನು ಅವರ ಪಾಲಿಗೆ ಬರಬೇಕು ಅಷ್ಟು ಹಣವನ್ನು ಖರ್ಚು ಮಾಡತಕ್ಕಂಥ ನಿರ್ದೇಶನವನ್ನು ನಾನು ಕೊಡುತ್ತೇನೆ.

ಶ್ರೀ ಬಾಬುರಾವ್ ಚವಾಣ್: ಮಾನ್ಯ ಅಧ್ಯಕ್ಷರೇ ನಿರ್ದೇಶನ ಕೊಟ್ಟರೆ ನಮ್ಮ ಸಮಸ್ಯೆ ಪರಿಹಾರ ಆಗುವುದಿಲ್ಲ, ಏಕೆಂದರೆ ತಾವು ಬರತಕ್ಕಂಥ ದುಡ್ಡನ್ನು ಜಿಲ್ಲಾ ಪರಿಷತ್ತಿನವರಿಗೆ ಕೊಡುತ್ತೀರಿ ಜಿಲ್ಲಾ ಪರಿಷತ್ತಿನಿಂದ ತಾಲ್ಲೂಕು ಆಫೀಸ್ಗೆ ಕೊಡುತ್ತಾರೆ. ನಂತರ ಅವರು ಒಬ್ಬ ಎಂ.ಎಲ್.ಎ ಗೆ ಜಾಸ್ತಿ ಖರ್ಚು ಮಾಡುತ್ತಾರೆ ಒಬ್ಬ ಎಂ.ಎಲ್.ಎ ಗೆ ಕಡಿಮೆ ಖರ್ಚು ಮಾಡುತ್ತಾರೆ. ನಾನು ಹೇಳತಕ್ಕಂಥವಾದ ಏನು ಇದೆ ಅಂದರೆ, ತಾವು ಬರತಕ್ಕಂಥ ದುಡ್ಡನ್ನು ಮತಕ್ಷೇತ್ರವಾರು ವರ್ಕೌಟ್ ಮಾಡಿದಾಗ 1 ಕೋಟಿ 50 ಲಕ್ಷ ರೂಪಾಯಿ ಅಂತ ಪ್ರತಿಯೊಬ್ಬ ಎಂ.ಎಲ್.ಎ ಗೆ ಯಾವಾಗ ಕೊಡುತ್ತೀರಿ ಆ ರೀತಿ ಕೊಡುವಾಗ ಸರಿಸಮಾನವಾಗಿ ಶಾಸಕರಿಗೆ ಕೊಡಿ. ಸರಿಸಮಾನವಾದ ರೀತಿಯಲ್ಲಿ ಕೆಲಸ ಆಗಲಿ. ಈ ರೀತಿ ಕೆಲಸ ಮಾಡಿಲ್ಲ ಅಧಿಕಾರಿ ಅಂದ್ರೆ, ಅವರ ಬಗ್ಗೆ ನಾವು ಕಂಪ್ಲೇಂಟ್ ಮಾಡಬೇಕು. ಅವರ ಬೆನ್ನಹತ್ತಬೇಕು. ಇದು ಒಂದೇ ಕೆಲಸ ವಿನಹಃ ನಮ್ಮ ಕೆಲಸ ಅಲ್ಲಿ ಆಗುವುದಿಲ್ಲ. ನಮ್ಮದು ಏನೂ ಅಭಿವೃದ್ಧಿ ಆಗುವುದಿಲ್ಲ, ಆದ್ದರಿಂದ ನಾನು ಮಾನ್ಯ ಮಂತ್ರಿಯವರಿಗೆ ಕೇಳುತ್ತಿದ್ದೇನೆ. ತಾವು ಕೊಡತಕ್ಕಂಥ ದುಡ್ಡನ್ನು ಅದೇ ತಾಲ್ಲೂಕು ಆಫೀಸ್ಗೆ ಕೊಡಿ, ಮತಕ್ಷೇತ್ರ ವಾರು ಎಷ್ಟು ದುಡ್ಡು ಬರುತ್ತಿದೆ, ಇಂತಹ ಮತಕ್ಷೇತ್ರಕ್ಕೆ ಇಂತಿಷ್ಟು ಪರ್ಸೆಂಟ್ ಹಣ ಅಂತ ಆ ತಾಲ್ಲೂಕು ಅಧಿಕಾರಿಗೆ ಕೊಡಿ. ಅಥವಾ ಜಿಲ್ಲಾಧಿಕಾರಿಗೆ ಕೊಡಿ. ಆದರೆ ನೀವು ಮತಕ್ಷೇತ್ರವಾರು ಮಾಡಿದರೆ ಸರಿಸಮಾನವಾದ ರೀತಿಯಲ್ಲಿ ಅಧಿಕಾರಿಗಳು ಕೆಲಸ ಮಾಡುತ್ತಾರೆ. ಇಲ್ಲದಿದ್ದರೆ ಏನು ಮಾಡುತ್ತಾರೆ ಅಂದರೆ ಇವರು ನನಗೆ ಟ್ರಾನ್ಸ್ಫರ್ ಮಾಡುತ್ತೇನೆಂದರು, ಅದಕ್ಕಾಗಿ ಇವರ ಕಡೆ ಹೆಚ್ಚು ಖರ್ಚು ಮಾಡಿಬಿಡುತ್ತಾರೆ.

ಅಧ್ಯಕ್ಷರು: ತಾವು ಉಪ ಪ್ರಶ್ನೆ ಕೇಳಿ.

ಶ್ರೀ ಬಾಬುರಾವ್ ಚವಾಣ್: ಮಾನ್ಯ ಅಧ್ಯಕ್ಷರೇ, ನಾನು ಏಕೆ ಇದನ್ನೆಲ್ಲಾ ಹೇಳುತ್ತಿದ್ದೇನೆಂದರೆ, ನನ್ನ ಮತಕ್ಷೇತ್ರಕ್ಕೆ ಕೇವಲ 80 ಲಕ್ಷ ರೂಪಾಯಿಗಳನ್ನು ಮಾತ್ರ

ಖರ್ಚು ಮಾಡಿದ್ದಾರೆ. ನಾಲ್ಕು ವರ್ಷಗಳಿಂದ ಹೆಚ್.ಕೆ.ಡಿ.ಪಿ. ಬಂದ ನಂತರ ಒಬ್ಬ ಶಾಸಕರಿಗೆ ಒಂದು ಕೋಟಿ 87 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ ದುಡ್ಡು ಖರ್ಚಾಗಿ ಹೋಗಿದೆ. ನಾನು ಪ್ರತಿ ಮೀಟಿಂಗ್ನಲ್ಲೂ 80 ಲಕ್ಷ ರೂ. ಮಾತ್ರ ಏತಕ್ಕೆ ನನ್ನ ಮತಕ್ಷೇತ್ರಕ್ಕೆ ಖರ್ಚು ಮಾಡಿದ್ದೀರಿ, ಒಂದು ಕೋಟಿ 50 ಲಕ್ಷ ರೂಪಾಯಿಗಳಿಗೆ ಏತಕ್ಕೆ ರೀಚ್ ಆಗಿಲ್ಲ. ಅಂತ ಕೇಳಿದಾಗ ಸರಿಯಾದ ಉತ್ತರ ಸಿಗುವುದಿಲ್ಲ. ದುಡ್ಡು ಬರುತ್ತಿರುವುದು ಒಬ್ಬ ಎಂ.ಎಲ್.ಎ ಗೆ ಹೋಗುತ್ತಿದೆ. ನಮ್ಮ ಪಾಲಿಗೆ ದುಡ್ಡು ಬರುತ್ತಿಲ್ಲ. ಆದ್ದರಿಂದ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇವೆ, ಯಾವಾಗ ತಾವು ಒಂದು ಕೋಟಿ 50 ಲಕ್ಷ ರೂಪಾಯಿ ಒಂದು ಮತಕ್ಷೇತ್ರಕ್ಕೆ ನಿಗದಿ ಮಾಡಿದ್ದಿರಿ. ಕೆಲಸ ಕೂಡ ಮತಕ್ಷೇತ್ರವಾರು ಮಾಡಿದಿರಿ, ರೂಪರೇಶೆಗಳನ್ನು ಕೂಡ ಮತಕ್ಷೇತ್ರವಾರು ಮಾಡಿದಿರಿ; ಆದರೆ ದುಡ್ಡು ಕೊಡುವ ಸಮಯದಲ್ಲಿ ಯಾಕೆ ಮತಕ್ಷೇತ್ರವಾರು ಮಾಡಿಲ್ಲ? ಅದು ತಾಲ್ಲೂಕು ವೈಜ್ ಮಾಡಿದ್ದರಿಂದ ಒಬ್ಬರಿಗೆ ಹೆಚ್ಚು ಒಬ್ಬರಿಗೆ ಕಡಿಮೆ ಹಣ ಖರ್ಚು ಮಾಡುವುದರಿಂದ ಬಹಳ ಅನ್ಯಾಯವಾಗುತ್ತಿದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತಿದ್ದೇನೆ. ಇದೂ ಕೂಡ ಸರಿಸಮಾನವಾಗಿ ಶಾಸಕರಿಗೆ ಬರಬೇಕು. ಒಬ್ಬರಿಗೆ ಜಾಸ್ತಿ ಒಬ್ಬರಿಗೆ ಕಡಿಮೆ ಆಗಬಾರದು ಅಂತ ಕೇಳುತ್ತಿದ್ದೇನೆ. ಅದು ಮಾಡಿಕೊಡುತ್ತೀರಾ ಎಂದು ದಯವಿಟ್ಟು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಈಗಾಗಲೇ ನಾನು ಹೇಳಿದ್ದೇನೆ ಮತ್ತು ಒಪ್ಪಿಕೊಂಡಿದ್ದೇನೆ. ಯಾಕೆಂದರೆ ಕ್ಷೇತ್ರದಲ್ಲಿ 1 ಕೋಟಿ 50 ಲಕ್ಷ ರೂ.ಗಳು ಕಾಮಗಾರಿಗಾಗಿ ಖರ್ಚಾಗಬೇಕಾಗಿತ್ತು. ಅದು ಆಗಿಲ್ಲ ಎಂಬ ಮಾತನ್ನು ಅವರು ಹೇಳಿದ್ದಾರೆ. ಆ ಒಂದು ಕೋಟಿ 50 ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿಸುತ್ತೇವೆ. ಎಲ್ಒಸಿ ಕೂಡ ಅದರ ಪ್ರಕಾರವೇ ಸಿಗುತ್ತದೆ. ತಮಗೆ ಗೊತ್ತಿರುವ ಹಾಗೆ ಕ್ಷೇತ್ರವಾರು ಎಲ್ಒಸಿಯನ್ನು ಬಿಡುಗಡೆ ಮಾಡುವುದಿಲ್ಲ. ಪೆಚ್ಕಿಡಿಬಿಗೆ ಡಿವಿಜನಲ್ ಕಮೀಶನರ್ ಹಣ ಬಿಡುಗಡೆ ಮಾಡುತ್ತಾರೆ. ಒಂದು ಕಡೆಯಲ್ಲಿ ಹೆಚ್ಚಿಗೆ ಕೆಲಸವಾದಾಗ ಹೆಚ್ಚು ಹಣವನ್ನು ಬಿಡುಗಡೆ ಮಾಡುತ್ತಾರೆ, ಇನ್ನೊಂದು ಕಡೆಯಲ್ಲಿ ಕಡಿಮೆ ಕೆಲಸವಾದಾಗ ಕಡಿಮೆ ಹಣವನ್ನು ಬಿಡುಗಡೆ ಮಾಡುತ್ತಾರೆ. ಆದರೆ ತಮ್ಮ ಕ್ಷೇತ್ರದಲ್ಲಿ 1 ಕೋಟಿ 50 ಲಕ್ಷಗಳಲ್ಲಿ ಕೇವಲ 80 ಲಕ್ಷ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಇನ್ನೂ 70 ಲಕ್ಷ ರೂಪಾಯಿಗಳ ಕೆಲಸವಾಗಿಲ್ಲ ಎಂಬ ವಾದವನ್ನು ಹೇಳುತ್ತಿದ್ದೀರಿ. ಅಷ್ಟು ಕೆಲಸವನ್ನು ನಾವು ಮಾಡಸಿಯೇ ಮಾಡಿಸುತ್ತೇವೆ. ಯಾಕೆಂದರೆ, ಅಷ್ಟರ ಮಟ್ಟಿಗೆ ಅವರಿಗೆ ನಿಗದಿ ಪಡಿಸಿದಂಥ ಹಣ ಇದೆ. ಆ ಹಣವನ್ನು ಖರ್ಚು ಮಾಡತಕ್ಕಂಥಾದ್ದರ ಬಗ್ಗೆ ಕಾಳಜಿಯನ್ನು ವಹಿಸಿ ಅದೇ ರೀತಿಯಾಗಿ ಹಣದ ಬಿಡುಗಡೆಯನ್ನು ಕೂಡ ಮಾಡುತ್ತೇವೆ.

ಶ್ರೀ ಬಾಬುರಾವ್ ಚೌಹಾಣ್: ನಮ್ಮ ಅವಧಿ ಮುಗಿಯಲು ಇನ್ನು ಐದು ತಿಂಗಳುಗಳು ಮಾತ್ರ ಇದೆ. ಅಷ್ಟರೊಳಗೆ 70 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೀರಾ ಎಂದು ತಿಳಿಸಬೇಕು.

ಅಧ್ಯಕ್ಷರು: ತಾವು ದಯಮಾಡಿ ಕುಳಿತುಕೊಳ್ಳಿ.

ಚು.ಗು.ಪ್ರ.ಸಂಖ್ಯೆ : 253 (801) ಅನ್ನು ಶ್ರೀ ವಾಟಾಳ್ ನಾಗರಾಜ್ರವರ ಪರವಾಗಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕೇಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗಾಗಲೇ ನಾನು ಹೇಳಿದ್ದೇನೆ ಮತ್ತು ಒಪ್ಪಿಕೊಂಡಿದ್ದೇನೆ. ಯಾಕೆಂದರೆ ಕ್ಷೇತ್ರದಲ್ಲಿ 1 ಕೋಟಿ 50 ಲಕ್ಷ ರೂ.ಗಳು ಕಾಮಗಾರಿಗಾಗಿ ಖರ್ಚಾಗಬೇಕಾಗಿತ್ತು. ಅದು ಆಗಿಲ್ಲ ಎಂಬ ಮಾತನ್ನು ಅವರು ಹೇಳಿದ್ದಾರೆ. ಆ ಒಂದು ಕೋಟಿ 50 ಲಕ್ಷ ರೂಪಾಯಿಗಳನ್ನು ನಾವು ಖರ್ಚು ಮಾಡಿಸುತ್ತೇವೆ. ಎಲ್‌ಒಸಿ ಕೂಡ ಆದರ ಪ್ರಕಾರವೇ ಸಿಗುತ್ತದೆ. ತಮಗೆ ಗೊತ್ತಿರುವ ಹಾಗೆ ಕ್ಷೇತ್ರವಾರು ಎಲ್‌ಒಸಿಯನ್ನು ಬಿಡುಗಡೆ ಮಾಡುವುದಿಲ್ಲ, ಹೆಚ್ಚೆಡಿಬಿಗೆ ಡಿವಿಜನಲ್ ಕಮೀಶನರ್ ಹಣ ಬಿಡುಗಡೆ ಮಾಡುತ್ತಾರೆ. ಒಂದು ಕಡೆಯಲ್ಲಿ ಹೆಚ್ಚಿಗೆ ಕೆಲಸವಾದಾಗ ಹೆಚ್ಚು ಹಣವನ್ನು ಬಿಡುಗಡೆ ಮಾಡುತ್ತಾರೆ, ಇನ್ನೊಂದು ಕಡೆಯಲ್ಲಿ ಕಡಿಮೆ ಕೆಲಸವಾದಾಗ ಕಡಿಮೆ ಹಣವನ್ನು ಬಿಡುಗಡೆ ಮಾಡುತ್ತಾರೆ. ಆದರೆ ತಮ್ಮ ಕ್ಷೇತ್ರದಲ್ಲಿ 1 ಕೋಟಿ 50 ಲಕ್ಷಗಳಲ್ಲಿ ಕೇವಲ 80 ಲಕ್ಷ ರೂ.ಗಳನ್ನು ಮಾತ್ರ ಬಿಡುಗಡೆ ಮಾಡಿದ್ದಾರೆ. ಇನ್ನೂ 70 ಲಕ್ಷ ರೂಪಾಯಿಗಳ ಕೆಲಸವಾಗಿಲ್ಲ ಎಂಬ ವಾದವನ್ನು ಹೇಳುತ್ತಿದ್ದೀರಿ. ಅಷ್ಟು ಕೆಲಸವನ್ನು ನಾವು ಮಾಡಿಸಿಯೇ ಮಾಡಿಸುತ್ತೇವೆ. ಯಾಕೆಂದರೆ, ಅಷ್ಟರ ಮಟ್ಟಿಗೆ ಅವರಿಗೆ ನಿಗದಿ ಪಡಿಸಿದಂಥ ಹಣ ಇದೆ. ಆ ಹಣವನ್ನು ಖರ್ಚು ಮಾಡತಕ್ಕಂಥಾದ್ದರ ಬಗ್ಗೆ ಕಾಳಜಿಯನ್ನು ವಹಿಸಿ ಅದೇ ರೀತಿಯಾಗಿ ಹಣದ ಬಿಡುಗಡೆಯನ್ನು ಕೂಡ ಮಾಡುತ್ತೇವೆ.

ಶ್ರೀ ಬಾಬುರಾವ್ ಚೌಹಾಣ್ : ನಮ್ಮ ಅವಧಿ ಮುಗಿಯಲು ಇನ್ನು ಐದು ತಿಂಗಳುಗಳು ಮಾತ್ರ ಇದೆ. ಅಷ್ಟರೊಳಗೆ 70 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೀರಾ ಎಂದು ತಿಳಿಸಬೇಕು.

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ.

ಚು.ಗು.ಪ್ರ.ಸಂಖ್ಯೆ : 253 (801) ಅನ್ನು ಶ್ರೀ ವಾಟಾಳ್ ನಾಗರಾಜ್‌ರವರ ಪರವಾಗಿ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕೇಳಬಹುದು.

**ರಾಷ್ಟ್ರೀಯ ಹಾಗೂ ರಾಜ್ಯ ಹೆದ್ದಾರಿಗಳ ಸಂಖ್ಯೆ**

805 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕರ್ನಾಟಕ ರಾಜ್ಯದಲ್ಲಿರುವ ರಾಷ್ಟ್ರೀಯ ಹೆದ್ದಾರಿಗಳ ಸಂಖ್ಯೆ ಎಷ್ಟು ಹಾಗೂ ಅವುಗಳು ಯಾವುವು?*

*ಆ) ರಾಜ್ಯದಲ್ಲಿರುವ ರಾಜ್ಯ ಹೆದ್ದಾರಿಗಳ ಸಂಖ್ಯೆ ಎಷ್ಟು ಮತ್ತು ಅವುಗಳು ಯಾವುವು?*

*ಇ) ಹಿಂದುಳಿದ ಗಡಿ ಪ್ರದೇಶದ ಚಾಮರಾಜನಗರದಿಂದ ಕೊಯಮತ್ತೂರಿಗೆ ಹೋಗುವ ರಸ್ತೆ ತೀವ್ರ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

*ಈ) ಆದರ ದುರಸ್ತಿಗಾಗಿ ಕೈಗೊಂಡ ಕ್ರಮವೇನು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು :

ಅ) 7 ರಾಷ್ಟ್ರೀಯ ಹೆದ್ದಾರಿಗಳಿವೆ. ವಿವರ ಅನುಬಂಧ-1ರಲ್ಲಿ ನೀಡಿದೆ.

ಆ) 78 ರಾಜ್ಯ ಹೆದ್ದಾರಿಗಳಿವೆ. ವಿವರ ಅನುಬಂಧ-2ರಲ್ಲಿ ನೀಡಿದೆ.

ಇ) ಸರ್ಕಾರದ ಗಮನಕ್ಕೆ ಬಂದಿದೆ.

ಈ) ಚಾಮರಾಜನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಸದರಿ ರಸ್ತೆಯ ಭಾಗವನ್ನು 92-93ರ ಸಾಲಿನಲ್ಲಿ 15 ಲಕ್ಷ ರೂ.ಗಳ ವೆಚ್ಚದಲ್ಲಿ ಆಯ್ದ ಭಾಗಗಳನ್ನು ದುರಸಿ ಪಡಿಸಿದೆ. 1993-94ರ ಸಾಲಿನಲ್ಲಿ 22 ಲಕ್ಷ ರೂ.ಗಳ ಅಂದಾಜಿನಲ್ಲಿ ಆಯ್ದ